ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಸಭಾಧ್ಯಕ್ಷರೇ, ನಾವು ಸಾರ್ವಜನಿಕವಾಗಿ ಬಹಳ ಮುಖ್ಯವಾಗಿರತಕ್ಕಂಥ ಮತ್ತು ಇತ್ತೀಚೆಗೆ ಹೈಕೋರ್ಟಿನಲ್ಲಿ ಕೊಟ್ಟಿರತಕ್ಕಂಥ ಅರಾಕ್ ಬಾಟ್ಲಿಂಗ್ ಕಂಟ್ರಾಕ್ಟ್ ವಿಚಾರದಲ್ಲಿ ಬಹಳ ಪ್ರಾಮುಖ್ಯವಾಗಿರತಕ್ಕಂಥ ವಿಚಾರವನ್ನು ಅತಿ ಶೀಘ್ರವಾಗಿ ಸದನದ ಚರ್ಚೆಗೆ ತೆಗೆದುಕೊಂಡು ಅದಕ್ಕೆ ಅನುಮತಿ ಅವಶ್ಯಕವಾಗಿ ಇದೆ ಎಂದೂ ತಮ್ಮ ಮನವನ್ನು ಒಲಿಸಬೇಕೆಂಬ ತೀರ್ಮಾನಕ್ಕೆ ಬಂದು ನಾವು ಅಲ್ಲದೆ ಆ ಕಡೆ ಕುಳಿತಿರತಕ್ಕಂಥ ಮಿತ್ರಪಕ್ಷಗಳಾದ ಕಮ್ಯುನಿಸ್ಟ್ ಸದಸ್ಯರು, ಮತ್ತು ಬಿ.ಜೆ.ಪಿ. ಸದಸ್ಯರು ಸತತವಾಗಿ ಪ್ರಯತ್ನ ಮಾಡಿದೆವು. ತಾವು ರೂಲಿಂಗ್ ಕೊಟ್ಟಿದ್ದೀರಿ. ಅದನ್ನು ಗಮನಿಸಿದೆ. ಆದರೂ ಕೂಡ ಹೈಕೋರ್ಟ್ ಕೊಟ್ಟಿರತಕ್ಕಂಥ ತೀರ್ಪಿನ ಪ್ರಕಾರ ಅದನ್ನು ನೋಡಿದಾಗ ಈ ವಿಚಾರವನ್ನು ಇಲ್ಲಿ ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಅಭಿಪ್ರಾಯವನ್ನು ಸರ್ಕಾರದವರು ವ್ಯಕ್ತಪಡಿಸಿದರು. ಈ ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎನ್ನುವ ಅಭಿಪ್ರಾಯವನ್ನು ತಾವು ಅಂತಿಮವಾಗಿ ತಿಳಿಸಿದ್ದೀರಿ. ತಮ್ಮ ತೀರ್ಪನ್ನು ಸದನ ಏಳತಕ್ಕಂಥ ಹೊತ್ತಿಗೆ ಕೊಟ್ಟರಿ. ನಾವು ಅಡ್ಜರ್ನ್‌ಮೆಂಟ್ ಮೋಷನ್ ಕಳಂಹಿಸಿಕೊಟ್ಟು ಈ ವಿಷಯ ಬಹಳ ವಿವರವಾಗಿ ಚರ್ಚೆಯಾಗಬೇಕಾಗಿದೆ, ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡಿದ್ದೆವು. ನಾವು ಪ್ರಿಲಿಮಿನರಿಯಾಗಿ ಸಬ್‌ಮಿಷನ್ ಮಾಡುವಾಗ ಅನೇಕ ವಿವರಗಳನ್ನು ಇಲ್ಲಿ ಹಾಕುವುದಕ್ಕೆ ಆಗವುದಿಲ್ಲ. ಅಂಕಿಅಂಶಗಳು ಇದೆ, ಕಂಟ್ರಾಕ್ಟ್ ವಿಚಾರ ಇದೆ, ಮತ್ತು ಬೇರೆ ವಿಚಾರಗಳು ಇವೆ, ಆದ್ದರಿಂದ ಇದನ್ನೆಲ್ಲ ಚರ್ಚೆ ಮಾಡಲು ಕಾಲಾವಕಾಶ ಬೇಕು, ಇದು ಅತಿ ಶೀಘ್ರವಾಗಿ ಚರ್ಚಿಸಬೇಕಾದ ವಿಚಾರವಾಗಿರುವುದರಿಂದ ಇದಕ್ಕೆ ಅನುಮತಿಯನ್ನು ಕೊಡಬೇಕೆಂದು ನಾವು ಮತ್ತು ನಮ್ಮ ಮಿತ್ರರು ಅರಿಕೆ ಮಾಡಿಕೊಂಡೆವು. ತಾವು ಮನಸ್ಸು ಮಾಡಲಿಲ್ಲ. ರೂಲಿಂಗ್ ಕೊಟ್ಟಿರಿ. ಈಗ ನಿಲುವಳಿ ಸೂಚನೆಗೆ ಅವಕಾಶವನ್ನು ಕೊಡಬೇಕು, ಇದರ ಬಗ್ಗೆ ಚರ್ಚೆಯಾಗಲೇ ಬೇಕು, ಹೈಕೋರ್ಟ್ ಕೊಟ್ಟಿರತಕ್ಕಂಥ ತೀರ್ಪನ್ನು ಅನುಸರಿಸಿ ರಾಜೀನಾಮೆಯನ್ನೂ ಕೂಡ ಕೊಡಬೇಕು ಎಂದು ಸರ್ಕಾರದ ಮೇಲೆ ಒತ್ತಡವನ್ನು ತಂದಿದ್ದೇವೆ. ಕೊನೆಗೆ ತಾವು ರೂಲಿಂಗ್ ಕೊಟ್ಟ ಮೇಲೆ ನಾವು ಪ್ರಶ್ನೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಸರ್ಕಾರ ರಾಜೀನಾಮೆಯನ್ನು ಕೊಡುವ ವಿಚಾರದಲ್ಲಿ ಯಾವ ಒಂದು ಅಭಿಪ್ರಾಯವನ್ನು ಕೊಡಬೇಕು ಈ ಸದನದಲ್ಲಿ ಎನ್ನುವ ವಿಚಾರ ಹೇಳಿ ನಾವು ಅನಿವಾರ್ಯವಾಗಿ ಧರಣಿ ಕುಳಿತುಕೊಳ್ಳುವ ಮಟ್ಟಕ್ಕೆ ಹೋದೆವು. ಧರಣಿ ಕುಳಿತುಕೊಂಡು ಚರ್ಚೆ ಮಾಡಬೇಕು ಎನ್ನುವ ಆಸಕ್ತಿ ನಮಗೆ ಇಲ್ಲ. ಇದು ನಾನು ತಳೆದ ಅಭಿಪ್ರಾಯ. ತಮ್ಮ ಗಮನಕ್ಕೂ ಕೂಡ ಇದು ಬಂದಿದೆ ಎಂದೂ ತಿಳಿದುಕೊಂಡಿದ್ದೇನೆ. ಈ ವಿಚಾರ ಇಷ್ಟಕ್ಕೆ ನಿಂತಿತು. ಈಗ ತಮ್ಮಲ್ಲಿ ವಿನಂತಿ ಮಾಡಿಕೊಳ್ಳತಕ್ಕಂಥದ್ದು ಏನೆಂದರೆ, ಈ ವಿಚಾರ ಬಹಳ ಗಹನವಾದ ವಿಚಾರವೆಂದು ತಮಗೂ ಕೂಡ ಗೊತ್ತಿರತಕ್ಕಂಥದ್ದಾಗಿರುತ್ತದೆ. ಇದು ನಮ್ಮ ಅಭಿಪ್ರಾಯ. ತಮ್ಮ ಮನಸ್ಸಿನಲ್ಲಿಯೂ ಕೂಡ ಚಿಂತನೆ ಇರತಕ್ಕಂಥ ವಿಚಾರವೆಂದು ಅಂದಾಜು ಮಾಡಬಲ್ಲೆ. ಆದ್ದರಿಂದ ಮತ್ತೆ ಈ ವಿಷಯದ ಬಗ್ಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕು. ಚರ್ಚೆ ಎಂದರೆ ಅನೇಕ ಮಾನ್ಯ ಸದಸ್ಯರು ಮಾತನಾಡುವವರಿದ್ದಾರೆ. ಈ ಕಡೆಯಿಂದಲೂ ಅನೇಕ ಮಾನ್ಯ ಸದಸ್ಯರು ಇದ್ದಾರೆ, ಆ ಕಡೆಯಿಂದಲೂ ಅನೇಕ ಜನ ಮಾನ್ಯ ಸದಸ್ಯರು ಇದ್ದಾರೆ. ಬಹಳ ವಿವರವಾಗಿ ಚರ್ಚೆ ಮಾಡತಕ್ಕಂಥದ್ದಕ್ಕೆ ಸರ್ಕಾರದವರು ಕೂಡ ಉತ್ತರವನ್ನು ಕೊಡಬೇಕಾಗುತ್ತದೆ. ಆದ್ದರಿಂದ ಕಾಲಾವಕಾಶ ಬಹಳವಾಗಿ ಬೇಕಾಗುತ್ತದೆ ಈಗ ಯಾವ ಜಡ್ಜ್‌ಮೆಂಟ್ ಬಂದಿರುತ್ತದೆ ಇದನ್ನು A to Z ಓದಲಿಕ್ಕೆ ಸಾಧ್ಯವಾಗಿಲ್ಲ. ಕೊನೆ ಕೊನೆಯಲ್ಲಿ ನಾವು ಕೂಡ ಎಷ್ಟು ಓದಲಿಕ್ಕೆ ಸಾಧ್ಯವಾಯಿತೋ ಅಷ್ಟು ಓದಿಕೊಂಡು ಮುಖ್ಯವಾದ ವಿಚಾರ ಪ್ರಸ್ತಾಪ ಮಾಡಿದ್ದೇವೆ. ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ. ಈ ವಿಷಯದ ಬಗ್ಗೆ ತಾವು ಎರಡು ದಿವಸಗಳ ಕಾಲ ಚರ್ಚೆಗೆ ಅನುವು ಮಾಡಿಕೊಡಬೇಕಾಗಿದೆ. ವಿಷಯ ಚರ್ಚೆಯಾಗುವಂಥ ಕಾಲದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಬೇರೆ ಮಂತ್ರಿಗಳು ಅದಕ್ಕೆ ಸಂಬಂಧಪಟ್ಟವರು ಇರಬೇಕು. ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಗಳು ಇರಬೇಕಾಗುತ್ತದೆ. ಏತಕ್ಕೆಂದರೆ ಅವರ ವಿಚಾರ ಕೂಡ ಜಡ್ಜ್‌ಮೆಂಟ್‌ನಲ್ಲಿ ಪ್ರಸ್ತಾಪಕ್ಕೆ ಬಂದಿರುತ್ತದೆ. ಆದ್ದರಿಂದ ಅವರೂ ಕೂಡ ಇರಬೇಕು. ಅವರು ಈಗ ದೆಹಲಿಯಲ್ಲಿ ನಡೆಯುತ್ತಿರತಕ್ಕಂಥ ಜಲ ಮಂಡಳಿ ಸಭೆಗೆ ಹೋಗಿದ್ದಾರೆಂದು ಪತ್ರಿಕೆಯಲ್ಲಿ ಓದಿದೆ. ಅವರು ಊರಲ್ಲಿ ಇಲ್ಲದ ಕಾರಣ ಮುಂದಿನ ವಾರದಲ್ಲಿ ಎರಡು ದಿವಸಗಳ ಕಾಲ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ. ಈವತ್ತು ತಾವು ರೂಲಿಂಗ್ ಕೊಟ್ಟಿರತಕ್ಕಂಥದ್ದನ್ನು ರಿವೈಸ್ ಮಾಡಬೇಕೆಂಬುದು

ನಮ್ಮೆಲ್ಲರ ಆಶಯ. ಇಂಥ ರೂಲಿಂಗ್ ಎಲ್ಲಿದೆ ಬಂಗಾರಪ್ಪ ಎಂದು ಕೇಳಬಹುದು. ಹಿಂದೆಲ್ಲ ಈ ರೀತಿ ನಡೆದಿದೆ. ಆದೇನೇ ಇರಲಿ ತಮಗೆ ಬಿಟ್ಟಿರತಕ್ಕಂಥ ವಿಷಯ. ಈ ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಮುತ್ತೆ ಎರಡು ದಿವಸಗಳ ಕಾಲ ಅವಕಾಶವನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿಯನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ತಿಳಿಸಲು ಇಚ್ಛಿಪಡುತ್ತೇನೆ. ಅವರೂ ಕೂಡ ಚರ್ಚೆಗೆ ಒಪ್ಪುತ್ತಾರೆನ್ನುವ ಭಾವನೆಯಿಂದ ಮಾತನಾಡಿದ್ದೇನೆ. ತಾವು ಸಭೆಗೆ ಹಾಜರಾಗಿ ಧಣಿ ಕುಳಿತುಕೊಂಡಿರತಕ್ಕಂಥ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಂಡ ತಕ್ಷಣ ಎದ್ದುಬಂದು ತಮ್ಮ ಸ್ಥಾನದಲ್ಲಿ ಕುಳಿತು ತಮಗೆ ಗೌರವವನ್ನು ಕೊಟ್ಟು ತಮ್ಮ ಮಾತನ್ನು ಅನುಸರಿಸಿದ್ದಾರೆ. ಸರ್ಕಾರದವರೂ ಕೂಡ ತಮ್ಮ ಸೂಚನೆಯನ್ನು ಒಪ್ಪುತ್ತಾರೆಂದು ತಮ್ಮ ಅಭಿಪ್ರಾಯ ಕೂಡ ಇದೆ ಎಂದು ಭಾವಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ವಿರೋಧಪಕ್ಷದ ನಾಯಕರು ಮತ್ತೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿದ್ದಾರೆ. ಆ ವಿಷಯ ನನಗೆ ಬಿಡಿ ಎಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೆಗೌಡ(ಮಾನ್ಯ ಲೋಕೋಪಯೋಗಿ ಮಂತ್ರಿಗಳು).—ಸರ್ಕಾರ ಹೇಳಿದ ಮೇಲೆ ತಾವು ಅಂತಿಮ ತೀರ್ಮಾನವನ್ನು ಕೊಡಬಹುದು.

ಸನ್ಮಾನ್ಯ ಸಭಾಧ್ಯಕ್ಷರೇ, ಶುಕ್ರವಾರ ಕರ್ನಾಟಕ ಉಚ್ಚ ನ್ಯಾಯಾಲಯ ಬಾಟ್ಲಿಂಗ್ ಪ್ರಕರಣದ ಬಗ್ಗೆ ನೀಡಿರುವ ತೀರ್ಪಿನ ವಿಚಾರವಾಗಿ ಈ ಸದನದಲ್ಲಿ ಕಾರ್ಯಕಲಾಪಗಳನ್ನು ಮುಂದಿಟ್ಟು ಚರ್ಚೆ ಮಾಡಬೇಕೆಂದು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ನನ್ನೆ ತಮಗೆ ಅನುಮತಿ ಕೋರಿ ಪ್ರಸ್ತಾವನೆಯನ್ನು ಕಳುಹಿಸಿದ್ದರು. ಇದು ಆದ ಮೇಲೆ ದಿನದ ಕಾರ್ಯಕಲಾಪಗಳು ಮುಗಿಯುವುದಕ್ಕೆ ಮುಂಚೆ ತಮ್ಮ ತೀರ್ಪಿನ ಘೋಷಣೆಯನ್ನು ಮಾಡಿದಿರಿ ಸಮ್ಮತಿಯನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು. ಇದಾದ ಮೇಲೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ವಿರೋಧ ಪಕ್ಷದ ಸದಸ್ಯರುಗಳು ಧರಣಿ ಪ್ರಾರಂಭ ಮಾಡಿದರು. ಈ ಧರಣಿಯ ಉದ್ದೇಶ ಎರಡು ಇದೆ ಎನ್ನುವ ಮಾತನ್ನೂ ಕೂಡ ಹೇಳಿದ್ದಾರೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಒಂದನೆಯದಾಗಿ ಈ ವಿಷಯದ ಬಗ್ಗೆ ಇನ್ನು ಹೆಚ್ಚು ಚರ್ಚೆ ಮಾಡುವುದಕ್ಕೆ ಅವಕಾಶ ಸಿಕ್ಕಿಲಿಲ್ಲ ಎಂಬುದು ಮತ್ತೆ ರಾಜೀನಾಮೆಯನ್ನು ಕೊಡಬೇಕು ಎಂಬುದು ಎರಡು ವಿಷಯಗಳನ್ನು ಆಳವಡಿಸಿಕೊಂಡು ನಿರ್ಣಯವನ್ನು ಮಾಡಿ ಈ ಮಾತನ್ನು ಹೇಳಿದರು. ಈ ಸಂದರ್ಭದಲ್ಲಿ ನಾನು ಹೇಳುವುದು ಇಷ್ಟೆ, ಸಾರ್ವಜನಿಕ ದೃಷ್ಟಿಯಿಂದ ಬಹಳ ಮಹತ್ವದ ವಿಷಯ ಎನ್ನುವ ಬಗ್ಗೆ ಸೃಷ್ಟೀಕರಣ ಮಾಡುವುದಕ್ಕೆ ಹೋಗಿದ್ದಾರೆ ಎಲ್ಲ ಕ್ಲಾಸ್ ಹಾಕಿದ್ದಾರೆ. ಚರ್ಚೆಯಾವ ಮಟ್ಟಕ್ಕೆ ಹೋಗಬಹುದು ಎನ್ನುವ ವಿಷಯ ಬೇರೆ. ನಿಲುವಳಿ ಸೂಚನೆಯ ಬಗ್ಗೆ ತಮ್ಮ ನಿರ್ಣಯ ಅಂತಿಮವಾಗಿದೆ. ಈ ಕಾರಣದಿಂದಾಗಿ ಮತ್ತೆ ಈ ನಿರ್ಣಯವನ್ನು ಮಾರ್ಪಾಡು ಮಾಡತಕ್ಕಂಥ ಕೆಟ್ಟ ಸಂಪ್ರದಾಯವನ್ನು ಅವರೂ ಕೂಡ ಒಪ್ಪುವುದಿಲ್ಲ, ನಾವು ಒಪ್ಪುವುದಕ್ಕೆ ಸಾಧ್ಯವಿಲ್ಲ. ವಿಷಯ ಅವರು ಅರ್ಥೈಸಿ ಚರ್ಚೆ ಸಾಕಷ್ಟು ಆಗಬೇಕಾಗಿದೆ ಎನ್ನುವ ಅಭಿಪ್ರಾಯವನ್ನು ವಿರೋಧ ಪಕ್ಷದ ನಾಯಕರು ಸೂಚಿಸಿದ್ದಾರೆ. ಇದನ್ನು ತಡೆ ಹಿಡಿಯಬೇಕೆಂಬ ಇಚ್ಛೆ ಸರ್ಕಾರಕ್ಕೆ ಇಲ್ಲ. ಇದು ಯಾವ ಸ್ವರೂಪದಲ್ಲಿಯಾದರೂ ಬರಬಹುದು. ನಿಯಮ ೩೧೧–೧೫೪ರಲ್ಲಿಯಾದರೂ ಆಗಬಹುದು. ಬೇರೆ ನಿಯಮಾವಳಿಯ ಚೌಕಟ್ಟಿನಲ್ಲಿಯಾದರೂ ಬರಬಹುದು. ಅಥವಾ ಅವಿಶ್ವಾಸ ನಿರ್ಣಯವನ್ನು ಮುಂದಿನ ಮಾಡುವುದರ ಮುಖಾಂತರವಾಗಿಯಾದರೂ ಆಗಬಹುದು. ಅದು ಅವರಿಗೆ ಸೇರಿದ್ದು ತಾವು ಸೂಚನೆಯನ್ನು ಕೊಟ್ಟ ಮೇಲೆ ನಾವು ಬಿಸಿನೆಸ್ ಅಡ್ವೈಸರಿ ಸಮಿತಿಯನ್ನು ಕರೆದು ದಿನವನ್ನು ಗೊತ್ತು ಮಾಡಿ ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ಸಾಧ್ಯ ಇದೆಯೆ ಇಲ್ಲವೇ ಎನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ. ಇದರ ಬಗ್ಗೆ ಸರ್ಕಾರದ ಪ್ರತಿಷ್ಠೆಯ ಪ್ರಶ್ನೆಯೇ ಇಲ್ಲ. ಇದು ೬ ಗಂಟೆಗಳ ಕಾಲ ಚರ್ಚೆಯಾಗಬಹುದು ಅಥವಾ ೮ ಗಂಟೆಯ ಕಾಲ ಚರ್ಚೆಯಾಗಬಹುದು. ಚರ್ಚೆಗೆ ತೆಗೆದುಕೊಳ್ಳುವ ಬಗ್ಗೆ ಬಿಸಿನೆಸ್ ಅಡ್ವೈಸರಿ ಕಮಿಟಿಯನ್ನು ಕರೆದು ತೀರ್ಮಾನ ಮಾಡಿದ ಮೇಲೆ ನಾವು ಆ ತೀರ್ಮಾನಕ್ಕೆ ಬದ್ಧರಾಗಿದ್ದೇವೆ. ಸರ್ಕಾರ ಯಾವುದನ್ನೂ ಮುಚ್ಚಿಟ್ಟು ಕುಳಿತುಕೊಳ್ಳಬೇಕು ಎನ್ನುವ ಇಚ್ಛೆ ಇಲ್ಲ. ನಾವು ಕೂಡ ಅಲ್ಲಿ ಕೂತು ಕೆಲಸ ಮಾಡಿದ್ದೇವೆ. ಇವತ್ತು ವಿರೋಧ ಪಕ್ಷದಲ್ಲಿರತಕ್ಕಂಥ ನನ್ನ ಸನ್ಮಾನ್ಯ ಸ್ನೇಹಿತರಿಗೆ ಒಂದು ಮಾತನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಈ ವಿಷಯದಲ್ಲಿ ಸಾರ್ವಜನಿಕರಿಂದ ಮರೆ ಮಾಚುವುದಕ್ಕೆ ಸರ್ಕಾರ ಹೋಗತಕ್ಕಂಥ ಪ್ರಮೇಯ ಇಲ್ಲ. ಇಷ್ಟೇ ಅಲ್ಲ, ಇದಕ್ಕೆ ಶಸಾ ್ತ್ರಗಳನ್ನು ಸಜ್ಜು

ಮಾಡಬೇಕಾದ ಪ್ರಮೇಯವೂ ನಮಗೆ ಇಲ್ಲ. ಅವರು ಯಾವುದೇ ಅಸ್ತ್ರವನ್ನು ಉಪಯೋಗಿಸಿದರೂ ಸಾಧ್ಯವಿದ್ದರೆ ತಡೆಗಟ್ಟುತ್ತೇವೆ. ನಮಗೆ ಯಾವ ಅಂಜಿಕೆಯೂ ಇಲ್ಲವೆಂದು ಹೇಳುತ್ತೇನೆ. ಆದರೆ ಒಂದು ಮಾತನ್ನು ಮಾತ್ರ ಹೇಳುತ್ತೇನೆ. ಅದೇನೆಂದರೆ, ರಾಜೀನಾಮೆಗೋಸ್ಕರವಾಗಿ ಸತ್ಯಾಗ್ರಹ ಮಾಡುತ್ತೇವೆ ಎಂದು ಅವರು ಏನು ಹೇಳಿದರು, ಇಡೀ ಪ್ರಪಂಚದ ಇತಿಹಾಸದಲ್ಲಿ ಬಹುಶಃ ರಾಜೀನಾಮೆ ತೆಗೆದುಕೊಳ್ಳಲಿಕ್ಕೆ ಧರಣಿ ನಡೆಸಿದಂಥ ಸನ್ನಿವೇಶ ಎಲ್ಲೂ ಉಂಟಾಗಿಲ್ಲವೆಂದು ಹೇಳುತ್ತೇನೆ. ಚರ್ಚೆ ನಡೆಸುವ ಮುನ್ನ ಬಿಜಿನೆಸ್ ಅಡ್ವೈಸರಿ ಕಮಿಟಿಯ ಮೀಟಿಂಗ್ ಕರೆಯಿರಿ ಎಂದು ನಾನಂ ಹೇಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಸರ್ಕಾರದಿಂದ ಚರ್ಚೆ ನಡೆಸುವುದಕ್ಕೆ ಅಭ್ಯಂತರ ಇಲ್ಲವೆಂದು ಹೇಳಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಇನ್ನೂ ಬಹಳ ವಿಶೇಷವಾದದ್ದು ಹೇಳುವುದಿದೆ ಎಂದು ಹೇಳಿದರು.....

ಶ್ರೀ ಎಂ. ವೀರಪ್ಪ ಮೊಯಿಲಿ.—ಅದನ್ನು ಹೇಳಿಬಿಟ್ಟಿದ್ದರೆ ತಾವು ರಾಜೀನಾಮೆ ಕೊಟ್ಟು ಬಿಡುತ್ತಿದ್ದೀರಾ?

ಶ್ರೀ ಜೆ. ಹೆಚ್. ಪಟೇಲ್.—ನಿನ್ನೆ ಇಡೀ ದಿವಸ ದೊಡ್ಡ ಬಣವೆಯಲ್ಲಿ ಸೂಜಿ ಹುಡುಕಿದರು. ಈಗ ಇನ್ನೊಂದು ದಿವಸ ಹುಡುಕುತ್ತೇವೆ ಎಂದು ಹೇಳುತ್ತಿದ್ದಾರೆ, ಹುಡುಕಲಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾವು ಚರ್ಚೆ ಮಾಡಿದ ಮೇಲೆ ಖಂಡಿತವಾಗಿಯೂ ಸರ್ಕಾರ ರಾಜೀನಾಮೆ ಕೊಡುತ್ತದೆ. ಶ್ರೀ ದೇವೇಗೌಡರು ರಾಜೀನಾಮೆ ಕೊಡಿಸುತ್ತಾರೆ ಎನ್ನುವ ವಿಶ್ವಾಸ ನನಗೆ ಇದೆ.

ಶ್ರೀ ಹೆಚ್. ಡಿ. ದೇವೇಗೌಡ.—ರಾಜೀನಾಮೆ ಕೊಡಿಸುತ್ತೇನೆ. ಆದರೆ ಅದನ್ನು ಶ್ರೀನಿವಾಸರ ಕೈಯಲ್ಲಿ ಕೊಡಬೇಕೋ, ಬಂಗಾರಪ್ಪನವರ ಕೈಗೆ ಕೊಡಬೇಕೋ, ಇಲ್ಲ ಶ್ರೀ ವೀರಪ್ಪ ಮೊಯಿಲಿಯವರ ಕೈಗೆ ಕೊಡಬೇಕೋ ಎನ್ನುವುದು ಪ್ರಶ್ನೆ.

ಶ್ರೀ ಎಂ. ರಘುಪತಿ.—ಬಂಗಾರಪ್ಪನವರು ಬೇರೆ ಯಾರ ಕೈಗೆ ಕೊಟ್ಟರೂ ಸಹಿಸುವುದಿಲ್ಲ. ಅವರ ಕೈಗೇ ಕೊಡಬೇಕು.

ಅಧ್ಯಕ್ಷರು.—ಬಂಗಾರಪ್ಪನವರೇ, ನೀವು ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಶ್ರೀಮಾನ್ ದೇವೇಗೌಡರು ಬಹಳ ಚೆನ್ನಾಗಿ ಹೇಳಿದ್ದಾರೆ. ಅದನ್ನು ನಾನು ಗ್ರಹಿಸಿದ್ದೇನೆ. ಬಹಳ ಸಂತೋಷ, ಚರ್ಚೆಗೆ ಒಪ್ಪಿಗೆ ಕೊಟ್ಟಿದ್ದಕ್ಕಾಗಿ ನಾನು ತಮ್ಮನ್ನು ಕೂಡ ಅಭಿನಂದಿಸುತ್ತೇನೆ. ಮಾನ್ಯ ಜೆ. ಹೆಚ್. ಪಟೇಲರು ನಿನ್ನೆ ನಾವು ಬಣವೆಯಲ್ಲಿ ಸೂಜಿ ಹುಡುಕಿದೆವು ಎಂದು ಹೇಳಿದರು.

ಶ್ರೀ ಕೆ. ಹೆಚ್. ಶ್ರೀನಿವಾಸ.—ಅವರು ದೊಡ್ಡ ದೊಡ್ಡ ಪದಾರ್ಥ ಹುಡುಕುತ್ತಾರೆ. ನಾವು ಸೂಜಿ ಹುಡುಕುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಈ ಮೌಲ್ಯಾಧಾರಿತ ರಾಜಕಾರಣದ ಮೌಲ್ಯ ಮರೆತೇ ಹೋಗಿತ್ತು, ಅದು ನಿಮ್ಮಿಂದ ಮತ್ತೆ ಹುಟ್ಟಿತು ಎಂದು ಶ್ರೀ ಶ್ರೀನಿವಾಸ್ ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ಶುಕ್ರವಾರ ದಿವಸ ಜಡ್ಜ್‌ಮೆಂಟ್ ಬಂದಾಗಲೇ ನೀವು ರಾಜೀನಾಮೆ ಕೊಡುತ್ತೀರೆಂದು ಕರ್ನಾಟಕದ ಜನತೆ ತಿಳಿದುಕೊಂಡಿದ್ದರು. ಆದರೆ ಯಾವಾಗ ರಾಜೀನಾಮೆ ಕೊಡಲಿಲ್ಲ, ಆಗ ನಿಮ್ಮದು ಮೌಲ್ಯಾಧಾರಿತ ಅಲ್ಲ ಅಪಮೌಲ್ಯಾಧಾರಿತ ರಾಜಕಾರಣ ಎನ್ನುವುದು ಜನಕ್ಕೆ ಗೊತ್ತಾಗಲಿ ಎನ್ನುವ ದೃಷ್ಟಿಯಿಂದ ಧರಣಿ ಕುಳಿತುಕೊಳ್ಳಬೇಕೆಂದು ನಾವು ಮಾಡಿದ್ದು.....

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಜೆ. ಹೆಚ್. ಪಟೇಲರು ಒಂದು ಮಾತು ಹೇಳಿದರು. ದೊಡ್ಡ ಬಣವೆಯಲ್ಲಿ ಸೂಜಿ ಹುಡುಕುತ್ತೇವೆ ಅಂತ. ಅನೆ ಇದೆಯಲ್ಲ, ಅನೆಯನ್ನು ಸಾಯಿಸಬೇಕಾದರೆ ಇರುವೆಯಂನ್ನು ಅದರ ಕಿವಿಗೆ ಬಿಟ್ಟರೂ ಸಾಕಂ.

ಅಧ್ಯಕ್ಷರು.—ಎರಡೂ ಕಡೆಯ ಮುಖಂಡರ ಅಭಿಪ್ರಾಯವನ್ನು ನಾನು ಕೇಳಿದ್ದೇನೆ. ನನ್ನ ಉದ್ದೇಶ ವಿಷಯದ, ನನ್ನ ಕಾಲದಲ್ಲಿ ಅಹಿತಕರವಾದ ಘಟನೆಗಳಂ ಈ ಸಭೆಯಲ್ಲಿ ನಡೆಯಬಾರದು

ಎನ್ನುವುದು. ನಿಮ್ಮೆಲ್ಲರನೂ ವಿಶ್ವಾಸಕ್ಕೆ ತೆಗೆದುಕೊಂಡು ನಿಮಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟು, ತಮ್ಮ ತಮ್ಮ ಅಭಿಪ್ರಾಯವನ್ನು ಸಮರ್ಥವಾದ ರೀತಿಯಲ್ಲಿ ಹೇಳಲಿ ಎನ್ನುವುದು ನನ್ನ ಉದ್ದೇಶ. ನೀವು ಏನು ಹೇಳಿದ್ದೀರಿ ಅದನ್ನು ನಾನು ಮನಗಂಡಿದ್ದೇನೆ ಮತ್ತು ನಿಮಗೆ ಈ ಜಡ್ಜಮೆಂಟ್ ಬಗ್ಗೆ ಚರ್ಚೆ ಮಾಡಲಿಕ್ಕೆ ಹಿಂದಿನ ನಿಯಮಾವಳಿ ಪ್ರಕಾರ ನಾನು ಎರಡು ದಿವಸ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಅಧ್ಯಕ್ಷರೇ, ನಾನು ಹೇಳಿದ್ದೇನೆ. ಬಿಜಿನೆಸ್ ಅಡ್ವೈಸರಿ ಕಮಿಟಿ ಮಿಾಟಿಂಗ್ ಕರೆದು ನಿಯಮದ ಪ್ರಕಾರ.....

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರು ತೀರ್ಪು ಕೊಟ್ಟಮೇಲೆ ಹೀಗೆ ಹೇಳುವುದು ಸರಿಯಲ್ಲ.

ಶ್ರೀ ಎಂ. ರಘುಪತಿ.—ಬಿಜಿನೆಸ್ ಅಡ್ವೈಸರಿ ಕಮಿಟಿ ಮಿಾಟಿಂಗ್ ಕರೆಯಿರಿ. ಅಲ್ಲಿ ಕಾಲ ನಿರ್ಣಯ ಮಾಡಬಹುದು.

(ಗೊಂದಲ)

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಮಾನ್ಯ ಕೆ. ಎಚ್. ಪಾಟೀಲರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಚರ್ಚೆಗೆ ನಮ್ಮದು ಯಾವುದೇ ವಿರೋಧ ಇಲ್ಲವೆಂದು ಈಗಾಗಲೇ ಸ್ಪಷ್ಟೀಕರಣ ಮಾಡಿದ್ದೇವೆ. ಚರ್ಚೆಯನ್ನು ಒಂದು ದಿನ ಮಾಡಬೇಕೇ, ಎರಡು ದಿನ ಮಾಡಬೇಕೇ ಎಂಬುದು ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ಮಾಡಬೇಕು.

ಅಧ್ಯಕ್ಷರು.— ಶ್ರೀ ಬಂಗಾರಪ್ಪನವರೇ, ಸಾಧ್ಯವಾದರೆ ನಾಳೆ ದಿವಸ ಬಿಜಿನೆಸ್ ಅಡ್ವೈಸರಿ ಕಮಿಟಿ ಮಿಾಟಿಂಗ್ ಕರೆದು ಅದು ನಾಲ್ಕು ತಾಸು ಆಗಬಹುದು ಐದು ತಾಸು ಆಗಬಹುದು, ಚರ್ಚೆಗೆ ನಾನು ಅವಕಾಶ ಮಾಡಿಕೊಡುತ್ತೇನೆ. ಎರಡೂ ಕಡೆಯವರೂ ಇದಕ್ಕೆ ಒಪ್ಪಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ. ನಾವು ಕೂಡ ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿದ್ದೇವೆ ಎಲ್ಲರನ್ನೂ ಕರೆಯುತ್ತೇನೆ ಎಂದು ಹೇಳಿ. ಇಲ್ಲದಿದ್ದರೆ ವಿರೋಧಪಕ್ಷದ ನಾಯಕರು ಮತ್ತು ಸಭಾಯಕರು ಇಬ್ಬರನ್ನೂ ಮಾತ್ರ ಕರೆದಿದ್ದೀರಿ ಎಂದು ಅರ್ಥ ಬರುತ್ತದೆ.

ಅಧ್ಯಕ್ಷರು.—ಆಯಿತು ನೀವು ಕೂಡ ಇದ್ದೀರಿ. ನಿಮ್ಮನ್ನೂ ಕೂಡ ಕರೆಯುತ್ತೇನೆ. ಇಲ್ಲಿಗೆ ಈ ವಿಷಯ ಮುಕ್ತಾಯ ಮಾಡೋಣ. ಇನ್ನು ಮುಂದೆ ಪ್ರಶ್ನೋತ್ತರಗಳು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಮೌಕಿಕ ಉತ್ತರಗಳು
ಗುಲಬರ್ಗ ಜಿಲ್ಲೆಯಲ್ಲಿ ಬಾಲವಾಡಿ ಕೇಂದ್ರಗಳು.

೭೪೩. ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿರುವ ಬಾಲವಾಡಿ ಕೇಂದ್ರಗಳ ಸಂಖ್ಯೆ ಎಷ್ಟು ?

ಆ) ಅಲ್ಲಿನ ಬಾಲವಾಡಿಗಳಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರ ಸಂಖ್ಯೆ ಎಷ್ಟು ? ಈಗ ಅವರುಗಳಿಗೆ ನೀಡುತ್ತಿರುವ ಒಟ್ಟು ವೇತನವೆಷ್ಟು ? ಅವರುಗಳು ಯಾವಾಗಿನಿಂದ ಕಾರ್ಯ ನಿರ್ವಹಿಸುತ್ತಿರುವರು ?

ಇ) ಬಾಲವಾಡಿಗಳಲ್ಲಿನ ಉಪಾಧ್ಯಾಯನಿಯರುಗಳನ್ನು ಕಡಿಮೆ ವೇತನಕ್ಕೆ ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುವಂತೆ ಒತ್ತಾಯಿಸುತ್ತಿರುವುದು ನಿಜವೇ ?

ಈ) ಹಾಗಿದ್ದರೆ ಸರ್ಕಾರದವರು ಈ ಅಂತರವನ್ನು ಸರಿಪಡಿಸಲು ತೆಗೆದುಕೊಂಡಿರುವ ಕ್ರಮವೇನು ?